ಬದುಕುವ ವೇತನ ಮತ್ತು ಕಿರುಕುಳ ಮುಕ್ತ ಕೆಲಸದ ವಾತಾವರಣವನ್ನು ಆಗ್ರಹಿಸಿ

# ಗಾರ್ಮೆಂಟ್ಸ್ ಕಾರ್ಮಿಕರ ಬೃಹತ್ ರ್‍ಯಾಲಿ ಹಾಗೂ ಸಭೆ

## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸಹಯೋಗದಲ್ಲಿ

ದಿನಾಂಕ: **31-01-2016**, ಭಾನುವಾರ : ಸಮಯ: ಬೆಳಿಗ್ಗೆ **10.30**ಕ್ಕೆ

**ರ್‍ಯಾಲಿ : ಟೌನ್ ಹಾಲ್‌ನಿಂದ ಜೆ.ಸಿ ರಸ್ತೆ ಮಾರ್ಗವಾಗಿ ಕನ್ನಡ ಸಾಹಿತ್ಯ ಪರಿಷತ್**

**ಸಭೆ : ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು**

**ಆತ್ಮೀಯ ಸಂಗಾತಿಗಳೇ,**

ಸುಮಾರು 5 ಲಕ್ಷ ಕಾರ್ಮಿಕರು ದುಡಿಯುತ್ತಿರುವ ಕರ್ನಾಟಕದ ಗಾರ್ಮೆಂಟ್ಸ್ ಉದ್ಯಮವು, ವಿದೇಶೀ ವಿನಿಮಯ ಗಳಿಸುವುದರಲ್ಲೂ ಸಹ ಮುಖ್ಯ ಪಾತ್ರ ವಹಿಸುತ್ತಿದೆ. ಕೆಲವು ಪ್ರತಿಷ್ಠಿತ ಕಂಪನಿಗಳಲ್ಲಿ 10 ರಿಂದ 50 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದು, ಆ ಕಂಪನಿಗಳು ವರ್ಷಕ್ಕೆ ಸಾವಿರಾರು ಕೋಟಿ ವ್ಯವಹಾರ ನಡೆಸುತ್ತಿವೆ. ಉದ್ಯಮವು ಈಗ ಬೆಂಗಳೂರು ಅಲ್ಲದೆ ಉಳಿದ ಜಿಲ್ಲೆಗಳಿಗೆ ಸ್ಥಳಾಂತರವಾಗುತ್ತಾ ವಿಸ್ತಾರವಾಗುತ್ತಿದೆ. ಈ ಗಾರ್ಮೆಂಟ್ಸ್ ಕಂಪನಿಗಳಲ್ಲಿ ತಯಾರಾದ ಉಡುಪುಗಳನ್ನು ಪ್ರತಿಷ್ಠಿತ ಅಂತರರಾಷ್ಟ್ರೀಯ ಬ್ರಾಂಡ್‌ಗಳಿಗೆ ರಫ್ತು ಮಾಡಲಾಗುತ್ತಿದೆ. ವರ್ಷಕ್ಕೆ ಲಕ್ಷಾಂತರ ಕೋಟಿ ಲಾಭ ಮಾಡುತ್ತಾ, ಅದನ್ನೇ ಗುರಿಯಾಗಿಸಿಕೊಂಡ ಈ ಬ್ರಾಂಡ್‌ಗಳು ಗಾರ್ಮೆಂಟ್ಸ್ ಕಾರ್ಮಿಕರ ಮೂಲ ಮಾಲೀಕರಾಗಿದ್ದು, ತಮ್ಮ ಹೊಣೆಗಾರಿಕೆಯನ್ನು ಮರೆತು ಅವರ ಶೋಷಣೆಗೆ ಪರೋಕ್ಷ ಹೊಣೆಗಾರರಾಗಿದ್ದಾರೆ. ಈ ಉದ್ಯಮದಲ್ಲಿ ಶೇ. 90 ಭಾಗ ಮಹಿಳೆಯರೇ ದುಡಿಯುತ್ತಿದ್ದು, ಅತ್ಯಂತ ಕಡಿಮೆ ವೇತನ, ಕೆಲಸದ ಸ್ಥಳದಲ್ಲಿ ಕಿರುಕುಳ, ಅತಿ ಹೆಚ್ಚು ಪ್ರೊಡಕ್ಷನ್ ಒತ್ತಡ, 8 ಗಂಟೆಗಿಂತ ಹೆಚ್ಚು ದುಡಿಮೆ ಈ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಶೋಷಣೆ ಅನುಭವಿಸುತ್ತಿದ್ದಾರೆ.

ಗಾರ್ಮೆಂಟ್ಸ್ ಕಾರ್ಮಿಕರಿಗೆ ಇಂದಿಗೂ ದೊರೆಯುತ್ತಿರುವುದು ಬಡತನದ ರೇಖೆಗಿಂತ ಕಡಿಮೆಯಾದರೂ. 7000ಗಳ ಕನಿಷ್ಠ ವೇತನ ಅಷ್ಟೇ. 2014ರ ವರೆಗೆ ಕೇವಲ 4,700 ರೂ. ಇದ್ದ ಕನಿಷ್ಠ ವೇತನವು GATWUವಿನ ಸತತ ಹೋರಾಟದಿಂದ 7000ದ ವರೆಗೆ ಹೆಚ್ಚಾಯಿತು. ಆದರೆ ಈ ವೇತನವೂ ಸಹ ವೈಜ್ಞಾನಿಕವಾಗಿ ನಿಗದಿಯಾಗಲಿಲ್ಲ. ಇಷ್ಟು ಕಡಿಮೆ ವೇತನವು ನಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಅತ್ಯಂತ ಕೆಳಮಟ್ಟಕ್ಕೆ ತಳ್ಳುತ್ತಿವೆ. ಸಾಮಾಜಿಕ ಅಸಮಾನತೆ ಹೆಚ್ಚಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳೆಲ್ಲ ಕೈಗೆಟುಕದಷ್ಟು ಹೆಚ್ಚಾಗಿರುವ ಈ ಸಂದರ್ಭದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಅತ್ಯಂತ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ ಎಂಬುದು GATWU ನಡೆಸಿದ ಸಮೀಕ್ಷೆಯಿಂದ ಕಂಡುಬರುತ್ತಿದೆ. ಸರ್ಕಾರಗಳು ಕನಿಷ್ಠ ವೇತನವನ್ನು ನಿಗದಿ ಮಾಡುವಾಗ ಯಾವುದೇ ವೈಜ್ಞಾನಿಕ ತಳಹದಿಯ ಮೇಲೆ ನಿಗದಿಗೊಳಿಸದೇ ಇರುವುದೂ ಸಹ ಕಾರ್ಮಿಕರ ಈ ಪರಿಸ್ಥಿತಿಗೆ ಮುಖ್ಯ ಕಾರಣವಾಗಿದೆ. ಒಂದೊಮ್ಮೆ ಸರ್ಕಾರ ಇದಕ್ಕೆ ಪ್ರಯತ್ನಿಸಿದಲ್ಲಿ ಮಾಲೀಕರು ಅದನ್ನು ಖಡಾಖಂಡಿತವಾಗಿ ವಿರೋಧಿಸುತ್ತಿರುವುದು ಇತ್ತೀಚಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಮುಖ್ಯವಾದ ಮತ್ತೊಂದು ಸಮಸ್ಯೆ ಎಂದರೆ ಕೆಲಸದ ಸ್ಥಳದ ಕಿರುಕುಳ. ದಿನನಿತ್ಯ ಸೂಪರ್‌ವೈಸರ್ ಫ್ಲೋರ್‌ಗಳ ಬೈಗುಳ, ಶಿಕ್ಷೆ, ದೈಹಿಕ ಹಲ್ಲೆ, ಅವಮಾನ, ಇದರೊಂದಿಗೆ ಅತೀವ ಪ್ರೊಡಕ್ಷನ್ ಒತ್ತಡ ಇವುಗಳಿಂದ ಮಹಿಳಾ ಕಾರ್ಮಿಕರು ಪ್ರತಿ ದಿನ 8 ಗಂಟೆಗಿಂತ ಹೆಚ್ಚು ಯಾವುದೇ ಭತ್ಯೆ ಇಲ್ಲದೆ ಕೆಲಸ ಮಾಡಬೇಕಾಗಿದೆ. ಕಡಿಮೆ ವೇತನವು ಅವರ ಜೀವನವನ್ನು ಕೆಳಮಟ್ಟಕ್ಕೆ ತೆಗೆದುಕೊಂಡು ಹೋದರೆ, ಕಿರುಕುಳವು ಅವರ ಕೆಲಸದ ಸ್ಥಳದ ಸ್ಥಿತಿಯನ್ನು ಶೋಚನೀಯಗೊಳಿಸಿದೆ. ಮಹಿಳಾ ಕಾರ್ಮಿಕರ ಆರೋಗ್ಯದ ಮೇಲೆ ಈ ಎರಡೂ ನೇರವಾಗಿ ಪರಿಣಾಮ ಬೀರುತ್ತಿದೆ.

ಈ ಹಿನ್ನೆಲೆಯಲ್ಲಿ GATWU ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸಂಘಟನೆಗಳ ನೇತೃತ್ವದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ದಿನಾಂಕ: **31-01-2016** ರಂದು ಬೃಹತ್ ರ್‍ಯಾಲಿ ಹಾಗೂ ಸಭೆ ನಡೆಸಿ ಅಂತರರಾಷ್ಟ್ರೀಯ ಬ್ರಾಂಡ್‌ಗಳಿಗೆ, ತಮ್ಮ ಮಾಲೀಕರಿಗೆ ಹಾಗೂ ಸರ್ಕಾರಕ್ಕೆ ಈ ಕೆಳಗಿನ ಅಂಶಗಳನ್ನು ಕುರಿತು ಆಗ್ರಹಿಸಲಿದ್ದಾರೆ.

- ಬದುಕುವ ವೇತನ ನೀಡುವಂತೆ, ಕಿರುಕುಳ ಮುಕ್ತ ವಾತಾವರಣ ಸೃಷ್ಟಿಮಾಡುವಂತೆ ಮತ್ತು ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನು ಗೌರವಿಸುವಂತೆ ಅಂತರರಾಷ್ಟ್ರೀಯ ಬ್ರಾಂಡ್‌ಗಳು ಗಾರ್ಮೆಂಟ್ಸ್ ಮಾಲೀಕರಿಗೆ ಒತ್ತಡ ಹೇರಬೇಕು.
- ಗಾರ್ಮೆಂಟ್ಸ್ ಕಾರ್ಮಿಕರಿಗೆ ಮಾಲೀಕರು ಗೌರವವಾಗಿ ಬದುಕುವ ವೇತನ ನೀಡಬೇಕು.
- ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನು ಗೌರವಿಸಬೇಕು
- ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಕಿರುಕುಳ ಮುಕ್ತ ಕೆಲಸದ ವಾತಾವರಣದಲ್ಲಿ ಕೆಲಸ ಮಾಡಲು ನೆರವಾಗುವಂತೆ ಸರ್ಕಾರವು ಮೇಲ್ವಿಚಾರಣೆ ನಡೆಸಬೇಕು.
- ಅಸಮರ್ಪಕ ಹಾಗೂ ದುಬಾರಿ ಸಾರಿಗೆ ವ್ಯವಸ್ಥೆಯಿಂದ ಮಹಿಳಾ ಕಾರ್ಮಿಕರು ಅತ್ಯಂತ ತೊಂದರೆಗೊಳಗಾಗುತ್ತಿದ್ದು, ಇದಕ್ಕೆ ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು..

ಅಂದು ನಮ್ಮೊಂದಿಗೆ :

**ಡಾ. ವಸುಂಧರಾ ಭೂಪತಿ**, *ಅಧ್ಯಕ್ಷರು, ಕರ್ನಾಟಕ ಲೇಖಕಿಯರ ಸಂಘ*

**ಪ್ರೊ. ಬಾಬು ಮ್ಯಾಥ್ಯೂ**, *NLSIU*

**ಶ್ರೀಮತಿ ಮಂಜುಳಾ ಮಾನಸ**, *ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ*

**ಶ್ರೀಮತಿ ಯೋಗೇಶ್ವರಿ ವಿಜಯ್**, *ಅಧ್ಯಕ್ಷರು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ*

**ಕ್ಲಿಫ್ಟನ್‌ಡಿ'ರೊಜಾರಿಯೋ**, *ರಾಜ್ಯ ಪ್ರಧಾನ ಕಾರ್ಯದರ್ಶಿ, AICCTU*

**ಹೆಚ್ಚಿನ ಮಾಹಿತಿಗೆ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**

ನಂ. 216, ಚೆನ್ನಕೇಶವ ನಿಲಯ, ಎರಡನೇ ಮಹಡಿ, ಗಣೇಶ ದೇವಸ್ಥಾನದ ಹಿಂಭಾಗ, ಪಂತರ ಪಾಳ್ಯ, ಮೈಸೂರು ರಸ್ತೆ, ಬೆಂಗಳೂರು – 560 039 ಮೊ: **9901290495, 9686229761, 9844714476**

**ಬನ್ನಿ...... ತಾವೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ.....**

Scanned with OKEN Scanner